# ನೊಬೆಲ್ ಹಾದಿಯ ರಸಘಟ್ಟಗಳು

**ಅಕ್ಟೋಬರ್ ತಿಂಗಳಿನೊಂದಿಗೆ ನೊಬೆಲ್ ಪ್ರಶಸ್ತಿಯ ಸಂಭ್ರಮವೂ ಶುರುವಾಗುತ್ತದೆ. ಈ ವರ್ಷ ಯಾವ ಕ್ಷೇತ್ರದಲ್ಲಿ ಯಾರಿಗೆ ನೊಬೆಲ್ ಮನ್ನಣೆ ಎನ್ನುವುದರ ಬಗ್ಗೆ ಇಡೀ ವಿಶ್ವ ಕುತೂಹಲದ ಕಣ್ಣಾಗುತ್ತದೆ. ಪ್ರಶಸ್ತಿ ಪುರಸ್ಕೃತರ ಬಗ್ಗೆ ಜಗತ್ತು ಮಾತನಾಡುತ್ತದೆ. ಜಾಗತಿಕ ಮನ್ನಣೆ ಪಡೆದಿರುವ ಈ ಪ್ರಶಸ್ತಿ ರೂಪುಗೊಂಡ ಬಗೆ ಹಾಗೂ ಪ್ರಶಸ್ತಿ ವಿಜೇತರಿಗೆ ಸಂಬಧಿಸಿದಂತೆ ಸ್ವಾರಸ್ಯಕರ ಸಂಗತಿಗಳಿವೆ. ಈ ಸಂಗತಿಗಳು ನೊಬೆಲ್ ಪ್ರಶಸ್ತಿಗಳಷ್ಟೇ ಆಕರ್ಷಕ, ಸ್ವಾರಸ್ಯಕರ.**

■ **ಸಿಡ್ನಿ ಶ್ರೀನಿವಾಸ್**

ನೊಬೆಲ್ ಪ್ರಶಸ್ತಿ ರೂಪುಗೊಳ್ಳಲು ಮೂಲ ಕಾರಣ ಒಂದು ಪತ್ರಿಕೆ ಎಸಗಿದ ಪ್ರಮಾದ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ ಇದು ನಿಜ. ಆಲ್‌ಫ್ರೆಡ್ ನೊಬೆಲ್ (1833–1896) ಹತ್ತೊಂಬತ್ತನೇ ಶತಮಾನದ ಓರ್ವ ನುರಿತ ಎಂಜಿನಿಯರ್, ವಿಜ್ಞಾನಿ, ಉದ್ದಿಮೆಗಾರ ಮತ್ತು ಆಡಳಿತಗಾರ. ಸಿಡಿಮದ್ದು ಮತ್ತು ಡೈನಮೈಟ್ ತಯಾರಿಸಿ ಯಶಸ್ವಿಯಾಗಿ, ಯೂರೋಪಿನ ಹಲವಾರು ಎಡೆಗಳಲ್ಲಿ ತನ್ನ ಉದ್ಯಮಗಳನ್ನು ಸ್ಥಾಪಿಸಿ ಅಪಾರ ಹಣ ಗಳಿಸಿದ್ದ.

ಪ್ಯಾರಿಸ್‌ನಲ್ಲಿ ವಾಸವಿದ್ದ ಆಲ್‌ಫ್ರೆಡ್‌ಗೆ ಪ್ರತಿದಿನ ಐದಾರು ಪತ್ರಿಕೆಗಳನ್ನು ಓದುವ ಹವ್ಯಾಸ. ತನ್ನ ಬಗ್ಗೆ ಮತ್ತು ತನ್ನ ಉದ್ದಿಮೆಯ ಬಗ್ಗೆ ಜನ ಏನನ್ನುತ್ತಾರೆ ತಿಳಿಯುವ ಕುತೂಹಲ. ಆಲ್‌ಫ್ರೆಡ್‌ನ ಅಣ್ಣ, ತೈಲದ ದೊರೆ, ಲುಡ್ವಿಗ್ ನೊಬೆಲ್ 1888ರ ಏಪ್ರಿಲ್ 12ರಂದು ಫ್ರಾನ್ಸಿನ ಕ್ಯಾನೆಯಲ್ಲಿ ನಿಧನನಾಗಿದ್ದ. ಫ್ರೆಂಚ್ ಪತ್ರಿಕೆಯೊಂದು ಅಣ್ಣನ ಸಾವಿನ ಸುದ್ದಿಗೆ ನೀಡಿದ ತಲೆಬರಹವನ್ನು ನೋಡಿ ಆಲ್‌ಫ್ರೆಡ್ ದಂಗಾದ. ಆ ಶೀರ್ಷಿಕೆ: **Le marchand de la mort est mort** (ಸಾವಿನ ವರ್ತಕನ ಸಾವು). ಪತ್ರಿಕೆಯ ವರದಿಗಾರ ತಪ್ಪುಮಾಡಿದ್ದ. ಸತ್ತವನು ಆಲ್‌ಫ್ರೆಡ್ ಎಂದು ವರದಿಮಾಡಿದ್ದ. ತನ್ನ ಕುರಿತ ಶ್ರದ್ಧಾಂಜಲಿಯನ್ನು ತಾನೇ ಓದುವ ಪುಣ್ಯ; ತನ್ನ ಚರಮಗೀತೆಯನ್ನು ತಾನೇ ಕೇಳುವ ಅವಕಾಶ ಆಲ್‌ಫ್ರೆಡ್‌ಗೆ ದೊರೆತಿತ್ತು.

‘ಜನರನ್ನು ಸಾಯಿಸಲು ಸುಲಭ ಉಪಾಯಗಳನ್ನು ಕಂಡುಹಿಡಿದ ಆಲ್‌ಫ್ರೆಡ್ ನೊಬೆಲ್ ಇನ್ನಿಲ್ಲ’ ಎನ್ನುವ ಸುದ್ದಿಯನ್ನು ಓದಿ ಖಿನ್ನನಾದ. ಆತನ ಎಣಿಕೆ ಎಲ್ಲಿಯೋ ತಪ್ಪಿತ್ತು. ‘ಸಿಡಿಮದ್ದು, ಡೈನಮೈಟ್‌ಗಳನ್ನು ತಯಾರಿಸಿ ರಸ್ತೆ, ಸೇತುವೆ, ರೈಲ್ವೆ ನಿರ್ಮಾಣದಲ್ಲಿ ನೆರವಾಗುವ ಮೂಲಕ ನಾನು ಮಾನವನ ಕಲ್ಯಾಣಕ್ಕಾಗಿ ಶ್ರಮಿಸಿದ್ದೇನೆ’ ಎಂದು ಅವರೆಗೆ ಆಲ್‌ಫ್ರೆಡ್ ಭಾವಿಸಿದ್ದ. ಈಗ ಅವನ ನಂಬಿಕೆ ತಲೆಕೆಳಗಾಗಿತ್ತು. ಸಾವಿನ ನಂತರವೂ ಜನ ತನ್ನ ಹೆಸರನ್ನು ಸದಾ ಹೇಳುತ್ತಿರುವಂತೆ ಏನಾದರೂ ಮಾಡಬೇಕು ಎಂದು ಆತ ನಿರ್ಧರಿಸಿದ್ದು ಆಗಲೇ.

ಆಲ್‌ಫ್ರೆಡ್‌ಗೆ ಬೆರ್ಥಾ ವಾನ್ ಸಟ್‌ಲರ್ ಎಂಬ ಗೆಳತಿ ಇದ್ದಳು. ಪ್ರಣಯ ವ್ಯಾಕರಣವನ್ನರಿಯದ ಆತ ಗೆಳತಿಗೆ ಪ್ರೊಪೋಸ್ ಮಾಡುವುದಕ್ಕೇ ಹಿಂಜರಿದ! ಅವಳು ಆಲ್‌ಫ್ರೆಡ್‌ಗೆ, ‘ಜಗತ್ತಿನಲ್ಲಿ ಶಾಂತಿಗಾಗಿ ದುಡಿಯುವ ಜನರಿಗೆ ಏನಾದರೂ ಬಹುಮಾನ ಅಥವಾ ಸಹಾಯ ನೀಡು’ ಎಂದು ಅನೇಕ ಬಾರಿ ಒತ್ತಾಯಿಸಿದ್ದಳು. ಆ ಒತ್ತಾಯ ಈಗ ಕಾರ್ಯರೂಪಕ್ಕೆ ಬಂದಿತ್ತು. (ಬೆರ್ಥಾಗೆ 1905ರಲ್ಲಿ ಶಾಂತಿ ಸಾಧನೆಗಾಗಿ ನೊಬೆಲ್ ಬಹುಮಾನ ಕೊಡಲಾಯಿತು.) ಆಲ್‌ಫ್ರೆಡ್ ತನ್ನ ಹಿಂದಿನ (ಎರಡನೆಯ) ಉಯಿಲನ್ನು ರದ್ದುಗೊಳಿಸಿ ಮೂರನೆಯದನ್ನು ಬರೆದ. ಅದರ ಪರಿಣಾಮವೇ ಇಂದಿನ ನೊಬೆಲ್ ಬಹುಮಾನಗಳು.



ಆಲ್‌ಫ್ರೆಡ್ ನೊಬೆಲ್

ಸಾವಿಗೀಡಾದಾಗ ಆತನ ಆಸ್ತಿ 31 ದಶಲಕ್ಷ ಸ್ವೀಡಿಷ್ ಕ್ರೌನುಗಳು. ಇಂದು ಅದರ ಬೆಲೆ 500 ದಶಲಕ್ಷ ಅಮೆರಿಕನ್ ಡಾಲರುಗಳಿಗೆ ಸಮವಾಗುತ್ತದೆ. ತನ್ನ ಆಸ್ತಿಯಲ್ಲಿ ಶೇ. 94 ಭಾಗವನ್ನು ನೊಬೆಲ್ ಬಹುಮಾನಗಳಿಗೆ ಮೀಸಲಿಟ್ಟ ಆಲ್‌ಫ್ರೆಡ್, ಮಿಕ್ಕ ಶೇ. 6 ಭಾಗವನ್ನು ತನ್ನ ಬಂಧುಗಳಿಗೆ ನೀಡಿದ.

ಇಂದು ಎಲ್ಲರಿಗೂ ತಿಳಿದಂತೆ ಸಾಹಿತ್ಯ, ವೈದ್ಯಕೀಯ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಶಾಂತಿ ಕ್ಷೇತ್ರಗಳಲ್ಲಿ ದುಡಿದಿರುವ ಮಂದಿಯ ಕಾರ್ಯವನ್ನು ಗುರುತಿಸಿ ನೊಬೆಲ್ ಪ್ರಶಸ್ತಿಗಳನ್ನು ನೀಡಲಾಗುತ್ತದೆ. 1969ರಲ್ಲಿ ಅರ್ಥಶಾಸ್ತ್ರಕ್ಕೆಂದೇ ಮತ್ತೊಂದು ಪ್ರಶಸ್ತಿಯನ್ನು ಸ್ಥಾಪಿಸಲಾಯಿತು.

2020ರಲ್ಲಿ ಪ್ರತಿ ನೊಬೆಲ್ ಪ್ರಶಸ್ತಿಯ ಮೊತ್ತ 1.2 ದಶಲಕ್ಷ ಅಮೆರಿಕನ್ ಡಾಲರ್‌ಗಳಷ್ಟಿದೆ. ಒಬ್ಬರಿಗಿಂತ ಹೆಚ್ಚು ಮಂದಿಯನ್ನು ಒಂದೇ ಕ್ಷೇತ್ರದಲ್ಲಿ ಗುರ್ತಿಸಿದಾಗ (ಇದು ಈ ವರ್ಷಗಳಲ್ಲಿ ಸಾಮಾನ್ಯ) ಮೊತ್ತವನ್ನು ಸಮನಾಗಿ ಹಂಚಲಾಗುತ್ತದೆ. ಪ್ರತಿ ಬಹುಮಾನಿತರಿಗೂ ಸುಮಾರು 10,000 ಅಮೆರಿಕ ಡಾಲರ್ ಮೌಲ್ಯದ ಬೆಳ್ಳಿಯ ಪದಕವನ್ನೂ ನೀಡಲಾಗುತ್ತದೆ.

ಸಾವಿನ ಸುತ್ತಮುತ್ತ...

ಪ್ರಶಸ್ತಿ ನೀಡುವುದಕ್ಕೆ ಸಂಬಂಧಿಸಿದಂತೆ ಆಲ್‌ಫ್ರೆಡ್ ತನ್ನ ಉಯಿಲನ್ನು ಬದಲಿಸಿದ ನಂತರ ಆತನ ಜೀವನದಲ್ಲಿ ಪ್ರಮುಖ ಬದಲಾವಣೆಗಳಾದವು. ಫ್ರೆಂಚ್ ಸರ್ಕಾರ ಡೈನಮೈಟ್ ತಯಾರಿಸಲು ಆತನಿಗೆ ನೀಡಿದ್ದ ಅನುಮತಿಯನ್ನು ರದ್ದುಗೊಳಿಸಿತು. ಹೀಗಾಗಿ